ಮಲ್ಲಿಕಾರ್ಜುನ, ಸುರಧೇನುಪುರ

ಪ್ರಾಣವನ್ನು ಪಕ್ಷಿಗೆ ಏಕೆ ಹೋಲಿಸಿದ್ದಾರೆ?



ಸೂಚನೆ ನೀಡದೆ ಭಕ್ಕನೆ ಹೊರಟು ಹೋಗುವುದರಿಂದ.

ಚಿಕ್ಕೋಬನಹಳ್ಳಿ ಚಾಂದ್ ಬಾಷ, ತಳಕು

ಬಸ್ ಕಂಡಕ್ಟರ್‌ಗೂ, ಪಾರ್ಟಿ ಹೈಕಮಾಂಡ್‌ಗೂ ಇರುವ ವ್ಯತ್ಯಾಸ?

ಕಂಡಕ್ಟರ್‌ಗೆ ಚಿಲ್ಲರೆ ಇಲ್ಲದಿದ್ದರೆ ತೊಂದರೆ. ಹೈಕಮಾಂಡ್‌ಗೆ ಚಿಲ್ಲರೆಗಳಿಂದಲೇ ತೊಂದರೆ.

ಶ್ರೀನಿವಾಸ ಕೆ, ಬೆಂಗಳೂರು

ರಷ್ಯಾದಲ್ಲಿ ಸಂತಾನೋತ್ಪತ್ತಿ ಹೆಚ್ಚಳಕ್ಕೆ ಅಧ್ಯಕ್ಷರ ಕರೆ. ನಮ್ಮಲ್ಲಿ ಅಂತಹ ಕರೆ ಕೊಟ್ಟಿಲ್ಲವಲ್ಲ?

ನಮ್ಮವರು ಕರೆ ಕೇಳದೆಯೂ ಸಂತಾನವೃದ್ಧಿ ಪರಿಣತ ಮತಿಗಳ್!

ವಿನಾಯಕ ಎಂ.ಎಂ. ಹಂಪಸಾಗರ

ಕಾಡು ಉಳಿಸಿ, ನಾಡು ಬೆಳೆಸಿ ಎನ್ನುವವರೇ ಕಾಡು ಕಡಿದು ನಾಡು ಬೆಳೆಸುತ್ತಿರುವರಲ್ಲ?



ಅವರ ಪ್ರಕಾರ 'ಉಳಿಸಿ' ಎನ್ನುವುದು 'ಉಳ್ಳಿಉಳ್ಳಿಸಿಉರುಳಿಸಿ' ಎಂಬುದರ ಷಾರ್ಟ್ ಫಾರ್ಮ್ ಅಂತೆ.

ಬಿ. ಚಂದ್ರೇಗೌಡ, ಬೆಂಗಳೂರು

ನಿಜವಾದ ವಿದ್ಯಾರ್ಥಿ ಹೇಗಿರಬೇಕು?

ನಾಯಿಯ ನಿದ್ರೆ, ಕತ್ತೆಯ ಶ್ರಮ, ಆನೆಯ ಸ್ಮರಣಶಕ್ತಿ ಹೊಂದಿರಬೇಕು.

ಬೂಕನಕೆರೆ ವಿಜೇಂದ್ರ, ಮೈಸೂರು

ಶ್ರೀಮಂತರ ಮಕ್ಕಳೇಕೆ ದಡ್ಡರಾಗಿರುತ್ತಾರೆ?

ಟ್ಯೂಷನ್ ಫೀಸ್ ಕೊಡುವ ಮೂಲಕ ಬಡವರ ಬಡತನ ನಿವಾರಿಸಲು.

ಬಿ.ಆರ್. ಉಷಾ, ಬಾಲಿ

ವಿಮಾನದಲ್ಲಿ ಸೇವೆ ಮಾಡುವ ಹುಡುಗಿ ಗಗನಸಖಿ. ಹುಡುಗ?

ಗಗನಸಖಿಯ ಸಖ.

ಬಾ.ರಂ. ಸುರೇಶ, ಶಿವಮೊಗ್ಗ

ಪ್ರಣಯಕ್ಕೂ, ಪ್ರಳಯಕ್ಕೂ ಏನು ವ್ಯತ್ಯಾಸ?

ನಲ್ಲ–ನಲ್ಲೆಯರಲ್ಲಷ್ಟೇ ಉಳಿದಿದ್ದರೆ ಪ್ರಣಯ; ನಲ್ಲನಲ್ಲೆಯರ ಸತಿಪತಿಗೆ ತಿಳಿದರೆ ಪ್ರಳಯ.

ಗಂಜಾಂ ನಾಗರಾಜ್, ಮೈಸೂರು

ಇಲ್ಲೊಬ್ಬರ ವಿಚಾರದಲ್ಲಿ ಸಾಲ ಕೊಟ್ಟವರೇ ತಲೆ ತಪ್ಪಿಸಿಕೊಂಡು ಓಡಾಡುವಂತೆ ಆಗಿದೆಯಲ್ಲ?

ಸಾಲ ಪಡೆದವಳನ್ನು 'ಸಾಲೀ' ಎಂದು ಕೂಗಿದುದರ ಪರಿಣಾಮವಂತೆ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ವೈರಾಗ್ಯದ ಮಾತುಗಳನ್ನು ಆಡುವವರೇ ಖರ್ಚು ಮಾಡಲು ಜಿಪುಣತನ ತೋರುವರಲ್ಲ?

ಹಣ ಬಿಚ್ಚಿದರೆ ಸ್ನೇಹಿತರು ಹೆಚ್ಚಿ ಚಟ ಬೆಳೆದು ವೈರಾಗ್ಯ ನಶಿಸೀತೆಂದು.

ಬಿದರಹಳ್ಳಿ ವಿಜಯ, ಹಿರೇಹಡಗಲಿ

ಕುಟುಂಬ ಎಂದರೇನು?

'ಕೂತು ಉಂಬುವ ಬಾ' ಎಂದು ಆಪ್ತವಾಗಿ ಸೇರುವ ರಕ್ತಸಂಬಂಧಿಗಳ ಗುಂಪು.

ಪಿ.ಜೆ. ರಾಘವೇಂದ್ರ, ಮೈಸೂರು

ಕಾರಾಗೃಹವು ಉಳ್ಳವರ ಪಾಲಿಗೆ ಉಪಕಾರಗೃಹ ಆಗಿದೆಯಲ್ಲ?

ಹದ್ದು ಬೀಳಿಸಿದ ತುಣುಕಿಗೆ ಮುಗಿಬಿದ್ದ ನಾಯಿಗಳು ಬಾಲ ಅಲ್ಲಾಡಿಸಿವೆಯಂತೆ.

ವಿ. ಹೇಮಂತಕುಮಾರ್, ಬೆಂಗಳೂರು

ದೀರ್ಘ ಚುಂಬನದಿಂದ ಮಧುಮೇಹ ಉಂಟಾಗುವುದಂತೆ. ಹೌದಾ?

ಊಹೂಂ. ಆದರೆ ಕೆಲವೊಮ್ಮೆ ನೋಡಿದವರ ಬಿಪಿ ಏರುತ್ತದೆ.

ಜಗದೀಶ ಬಿ. ಹೊಸೂರು, ಮೈಸೂರು

ಶಿಕ್ಷಣವು ಸಂಪೂರ್ಣ ಉಚಿತ ಆಗುವುದು ಯಾವಾಗ?

ಜನಪದರಂತೆ ಶಾಲೆಗೆ ಸೇರದೆಯೂ ಅವರಿವರಿಂದಲೇ ನೋಡಿ, ಕೇಳಿ ಕಲಿತಾಗ.

## ಬಹುಮಾನಿತ ಪ್ರಶ್ನೆ

ಎಸ್ವೆನ್ ಮಹಾಬಲರಾವ್, ಎನ್ನಾರ್‌ಪುರ

ಸತ್ತ ಮೇಲೆ ಸ್ನಾನ ಏಕೆ?

ಯಮಭಟರು 'ಥೂ ವಾಸನೆ' ಎನ್ನುತ್ತಾ ಹಿಂದಕ್ಕೆ ಕಳುಹಿಸಿಬಿಟ್ಟಾರೆಂಬ ಭಯ.

ಪಿ. ಜಯವಂತ ಪೈ, ಕುಂದಾಪುರ

ತಿಥಿಗೂ, ಅತಿಥಿಗೂ ವ್ಯತ್ಯಾಸವೇನು?

ಕೆಲವು ಸಂದರ್ಭಗಳಲ್ಲಂತೂ ಅತಿಥಿಯನ್ನು ನೋಡಿಕೊಳ್ಳುವಷ್ಟರಲ್ಲಿ ಆತಿಥೇಯನ ತಿಥಿ ಆಗಿರುತ್ತದೆ.

ವಿ.ಎಸ್.ಎಸ್. ಗುರುಮೂರ್ತಿ, ಬೆಂಗಳೂರು

ಹೆಣದ ಮುಂದೆ ಹಣ ಇಟ್ಟರೆ ಏನಾಗುತ್ತದೆ?

ಹೊರಲು ಬಂದವರಿಗೆ ಖುಷಿಯಾಗುತ್ತದೆ.

ಅನಸೂಯಾ ಟಿ, ಕೇದಿಗೆಮನೆ

ದುಡ್ಡಿನ ಕೋಟೆಯಲ್ಲಿ ಕುಳಿತ ರಾಜಕಾರಣಿಗಳನ್ನು ತಿವಿಯಲು ಯಾವ ಭರ್ಜಿ ಕೆಲಸ ಮಾಡುತ್ತೆ?

ಮರ್ಜಿ ಇಲ್ಲದೆ ನ್ಯಾಯವೀವ ನ್ಯಾಯಾಧೀ ಎಂಬ ಭರ್ಜಿ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಮನುಷ್ಯನು ನಗದೇ ಇದ್ದರೆ ಏನಾಗುತ್ತಿತ್ತು ಸರ್?



ಹಹ್ಹಹ್ಹಾ ಹೊಹ್ಹೋಹ್ಹೋ ಎನ್ನುವ ಲಾಫ್ಟರ್ ಕ್ಲಬ್‌ಗಳು ಹುಟ್ಟಿಕೊಳ್ಳುತ್ತಿರಲಿಲ್ಲ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಪಾಪಿ ಗಳಿಸಿದುದು ಪರರಿಗೆ. ಮಂತ್ರಿ ಗಳಿಸಿದುದು ಯಾರಿಗೆ?

ಓಹ್! ಪಾಪಿಗೂ ಮಂತ್ರಿಗೂ ವ್ಯತ್ಯಾಸವಿದೆ ಎನ್ನುವಿರೆ?

■ ರಾಮ್